ನಾನು ಇಂತಹ ಅಪಾಯಕ್ಕೆ ಅವಕಾಶ ಕೊಡಲಾರೆ.'

'ಏನೂ ಆಗಲ್ಲ, ನನ್ನನ್ನ ನಂಬು, ಮಿತಾಲಿಯ ಸ್ವರಯಂತ್ರವನ್ನು ತೆಗೆದು ಸುರಕ್ಷಿತವಾಗಿ ಪ್ರಯೋಗಶಾಲೆಯಲ್ಲಿ ಇಡುತ್ತೇವೆ. ಕಸಿ ಮಾಡಿರುವ ಸ್ವರಯಂತ್ರವನ್ನು ಅವಳಿಗೆ ಅಳವಡಿಸಿದರೂ ಅದು ಸರಿಯಾಗಿ ಕೆಲಸ ಮಾಡುತ್ತಿದೆಯೇ ಇಲ್ಲವೆ ಅನ್ನುವುದು ಖಚಿತವಾಗುವ ತನಕ ಅವಳ ಮೂಲ ಸ್ವರಯಂತ್ರ ನಾಶವಾಗದಂತೆ ಹಾಗೇ ಇಟ್ಟು ಬಿಡುತ್ತೇವೆ. ಈ ಆಪರೇಶನ್ ಯಶಸ್ವಿಯಾಗದಿದ್ದರೆ ಹೆಚ್ಚೇನು ನಷ್ಟವಿಲ್ಲ, ಒಂದೋ ಮಿತಾಲಿಯ ಶರೀರ ಹೊಸ ಸ್ವರಯಂತ್ರವನ್ನು ತಿರಸ್ಕರಿಸಬಹುದು ಇಲ್ಲವೆ ಅವಳ ಗಂಟಲಿನ ಸ್ನಾಯುಗಳಲ್ಲಿ ತೊಂದರೆಯುಂಟಾದರೆ ಅವಳ ಮಾತು ನಿಂತು ಹೋಗಬಹುದು.'

'ಬೇಡ, ಬೇಡ ನಾನು ಅಂತಹ ಅಪಾಯ ಎದುರು ಹಾಕಿಕೊಳ್ಳಲಾರೆ.'

'ನನ್ನ ಮಾತನ್ನು ಮೊದಲು ಸರಿಯಾಗಿ ಕೇಳಿಸಿಕೊ. ಹಾಗೇನಾದರೂ ಆದರೆ ಮತ್ತೆ ಸಣ್ಣದೊಂದು ಆಪರೇಶನ್ ಮಾಡಿ ಅವಳ ಮೂಲ ಸ್ವರಯಂತ್ರವನ್ನು ಅಳವಡಿಸಿದರಾಯಿತು. ಮತ್ತೊಂದು ಹದಿನೈದು ದಿನ ಆಸ್ಪತ್ರೆಯಲ್ಲಿರಬೇಕಾದೀತು. ಅಷ್ಟು ವೆಚ್ಚ ಭರಿಸಿದರಾಯಿತು. ಆದರೆ, ಈ ಆಪರೇಶನ್ ಯಶಸ್ವಿಯಾದರೆ... ನಮ್ಮ ಮಿತಾಲಿಯ ಸ್ವರ ಮೀತಾ ಲೋಲಗೆಕರ್‌ನಂತಾದೀತು ಅನ್ನುವುದನ್ನೊಮ್ಮೆ ಯೋಚಿಸಿ ನೋಡು. ನಾವು ಈ ವಿಷಯದ ಬಗ್ಗೆ ಹೊರಗೆ ಒಂದಕ್ಷರ ಮಾತಾಡಿದರೂ ತಮ್ಮ ಹೆಣ್ಣು ಮಕ್ಕಳಿಗೆ ಈ ಆಪರೇಶನ್ ಮಾಡಿಸಲು ತಂದೆ ತಾಯಂದಿರು ಮುಗಿಬಿದ್ದಾರು. ಈ ಆಪರೇಶನ್ನಿನ ಹಿಂದಿರುವ ಅಪಾಯ ನನಗೆ ಗೊತ್ತಿದೆ ಹಾಗೂ ನಾನು ಮೀತಾಳ ದೊಡ್ಡ ಫ್ಯಾನ್ ಆಗಿರುವುದರಿಂದ ಸಾತ್ವಿಕ್ ನನಗೆ ಕೇಳಿದ್ದಾನೆ.'

**'ಆಕೆ ಪ್ರಿಯತಮಾ ಅನ್ನುವ ಶಬ್ದವನ್ನು ಯಾವ ಆರ್ತತೆಯಲ್ಲಿ ಹೇಳುತ್ತಾಳೆಂದರೆ, ಅದು ಪ್ರಿಯಕರನನ್ನು ಉದ್ದೇಶಿಸಿ ಹೇಳಿದ್ದೆ? ಗಂಡನನ್ನು ಉದ್ದೇಶಿಸಿ ಹೇಳಿದ್ದೆ? ಇಲ್ಲ, ಆ ಪರಮೇಶ್ವರನನ್ನು ಉದ್ದೇಶಿಸಿ ಹೇಳಿದ್ದೇ? ಎನ್ನುವುದು ಅರ್ಥವಾಗದೆ ಕೇಳುಗರು ಬೆರಗಾಗುತ್ತಾರೆ.'**

'ಆದರೂ ನನಗೆ ಭಯ ಆಗುತ್ತಿದೆ' ವಿದ್ಯಾ ಪಟ್ಟು ಬಿಡದೆ ಹೇಳಿದಳು.

'ವಿದ್ಯಾ, ಮಿತಾಲಿ ನನಗೂ ಮಗಳಲ್ಲವೆ? ನನಗವಳ ಚಿಂತೆಯಿಲ್ಲವೆ?'

'ಆದರೆ ಅವಳ ದನಿಗೆ ಯಾವುದೇ ಅಪಾಯವುಂಟಾಗುವುದಿಲ್ಲ ತಾನೆ?'

'ಇಲ್ಲ, ನಾನೂ ಸಾತ್ವಿಕ ಇಬ್ಬರೂ ಅಲ್ಲಿರುತ್ತೇವೆ, ಹೇಗೂ ಮುಂದಿನ ವಾರ ಅವಳ ಪರೀಕ್ಷೆ ಮುಗಿದು ರಜೆ ಶುರುವಾಗುತ್ತದೆ. ನನ್ನನ್ನು, ಸಾತ್ವಿಕನನ್ನು ಅದಕ್ಕೂ ಹೆಚ್ಚು ವಿಜ್ಞಾನವನ್ನು ನಂಬು ವಿದ್ಯಾ.'

ಮಿತಾಲಿಯ ಶಾಲೆಗೆ ರಜೆ ಆರಂಭವಾದ ದಿನ ಅವಳನ್ನು ಸ್ಲೋನ್ ಆಸ್ಪತ್ರೆಯಲ್ಲಿ ಭರ್ತಿ ಮಾಡಲಾಯಿತು. ಸಾತ್ವಿಕ್‌ನ ವೀಕ್ಷಣೆಯಡಿ ಅವಳ ಆಪರೇಶನ್ ಯಶಸ್ವಿಯಾಯಿತು. ದೇವರ